ಕರ್ನಾಟಕ ವಿಧಾನಸಭೆ

ಬುಧವಾರ 24ನೇ ಮಾರ್ಚ್ 1999 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ರಮೇಶ್ ಕುಮಾರ್ ಅವರು) ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕೊರಟಗೆರೆ ತಾಲ್ಲೂಕಿನಲ್ಲಿ ಗ್ರಾಮಪಂಚಾಯ್ತಿ ಗ್ರಂಥಾಲಯ ಮಂಜೂರು.

150(941) ಶ್ರೀ ಸಿ. ಚನ್ನಿಗಪ್ಪ, (ಕೊರಟಗೆರೆ):— ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1998ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು? ಇದರಲ್ಲಿ ಕೊರಟಗೆರೆ ತಾಲ್ಲೂಕಿಗೆ ಮಂಜೂರಾಗಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಆ) ಇವುಗಳ ನಿರ್ಮಾಣಕ್ಕೆ ಹಾಗೂ ಮೇಲ್ವಿಚಾರಣೆಗೆ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆಯೇ, ಇಲ್ಲದಿದ್ದಲ್ಲಿ ಯಾವಾಗ ಮಾಡಿಕೊಳ್ಳಲಾಗುವುದು?

(ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):—

ಅ) 517

ಕೊರಟಗೆರೆ ತಾಲ್ಲೂಕಿಗೆ 2 ಗ್ರಾಮ ಪಂಚಾಯ್ತಿ ಗ್ರಂಥಾಲಯಗಳನ್ನು ಮಂಜೂರು ಮಾಡಲಾಗಿದೆ.

ಆ) ಗ್ರಾಮ ಪಂಚಾಯ್ತಿಯವರು ಒದಗಿಸುವ ಕಟ್ಟಡದಲ್ಲಿಯೇ ಗ್ರಂಥಾಲಯ ಪ್ರಾರಂಭಿಸುವುದರಿಂದ ನಿರ್ಮಾಣದ ಪ್ರಶ್ನೆ ಉದ್ಭವಿಸುವುದಿಲ್ಲ ಈಗಾಗಲೇ ಮಂಜೂರಾದ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳನ್ನು 1999ರ ಮೇ ತಿಂಗಳಲ್ಲಿ ಪ್ರಾರಂಭಿಸಲಾಗುವುದು ಹಾಗೂ ಮೇಲ್ವಿಚಾರಕರ ನೇಮಕಾತಿಯನ್ನು ಮೇ ತಿಂಗಳಲ್ಲಿ ಮಾಡಲಾಗುವುದು.

ಶ್ರೀ ಸಿ. ಚನ್ನಿಗಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಮ್ಮ ತಾಲ್ಲೂಕಿಗೆ ಎಷ್ಟು ಗ್ರಂಥಾಲಯಗಳನ್ನು ಮಂಜೂರುಮಾಡಿದ್ದಾರೆ? ಅವುಗಳನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎಂಬುದನ್ನು ದಯಮಾಡಿ ಅದರ ಬಗ್ಗೆ ತಿಳಿಸಬೇಕು.

ಶ್ರೀ ಆರ್. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೇ, ಇವರ ತಾಲ್ಲೂಕಿಗೆ ಎರಡು ಗ್ರಂಥಾಲಯಗಳನ್ನು ಕೊಟ್ಟಿದ್ದೇವೆ. ಈಗ ಮೇ ತಿಂಗಳಲ್ಲಿ ಅದನ್ನು ಉದ್ಘಾಟನೆ ಮಾಡುತ್ತೇವೆ.

ತೀರ್ಥಹಳ್ಳಿಯ ಜೆ.ಸಿ. ಆಸ್ಪತ್ರೆಯ ಹಾಮಗಾರಿಗೆ ಹಣದ ಮಂಜೂರಾತಿ.

151(944) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಹೆಲ್ತ್ ಪ್ರಾಜೆಕ್ಟ್ ಅಡಿಯಲ್ಲಿ ಒಳಪಡಿಸಲಾದ ಆಸ್ಪತ್ರೆಗಳ ಒಟ್ಟು ಸಂಖ್ಯೆ ಎಷ್ಟು? ಹಾಗೂ ಯೋಜನೆಯಲ್ಲಿ ತೊಡಗಿಸಲಾಗುವ ಒಟ್ಟು ಹಣ ಎಷ್ಟು?

ಆ)ಈ ಬಗ್ಗೆ ಇದುವರೆಗೆ ಖರ್ಚು ಮಾಡಲಾದ ಹಣ ಎಷ್ಟು?

ಇ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಯಾವ ಆಸ್ಪತ್ರೆಗಳನ್ನು ಈ ಯೋಜನೆಯಡಿ ಒಳಪಡಿಸಲಾಗಿದೆ?

ಈ) ಈ ಆಸ್ಪತ್ರೆಗಳಿಗೆ ಅದರಿಂದ ಏನೇನು ಸೌಲಭ್ಯ ಒದಗಿಸಲಾಗಿದೆ ಮತ್ತು ಇದಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು?

ಉ) ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯ ಹಾಮಗಾರಿಗೆ ಒದಗಿಸಲಾದ ಹಣ ಎಷ್ಟು? ಹಾಗೂ ಎಂದಿನಿಂದ ಪರ್ಯಾಯ ಕಟ್ಟಡ ಹಾಮಗಾರಿಯನ್ನು ಆರಂಭಿಸಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ಒಟ್ಟು 201 ಆಸ್ಪತ್ರೆಗಳನ್ನು ಆಳವಡಿಸಲಾಗಿದೆ ಹಾಗೂ ಈ ಯೋಜನೆಯಲ್ಲಿ ರೂ. 546 ಕೋಟಿಯನ್ನು ತೊಡಗಿಸಲಾಗುವುದು.

ಆ) ರೂ. 123.00 ಕೋಟಿ
(ಡಿಸೆಂಬರ್ 1998ರ ಅಂತ್ಯಕ್ಕೆ)

ಇ) ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ತೀರ್ಥಹಳ್ಳಿ